ಉದ್ಯಾನಕ್ಕೆ ಚಿಟ್ಟೆಗಳಂತೆ ಕಲಿಕಾ ಬೋಧನಾ ಉಪಕರಣಗಳತ್ತ ಮಕ್ಕಳು ಆಕರ್ಷಿತರಾಗುತ್ತಾರೆ

ಆದಿತ್ಯ ಗುಪ್ತ

ಮಕ್ಕಳ ಮನಸ್ಸೂ ಉದ್ಯಾನದಲ್ಲಿರುವ ಚಿಟ್ಟೆಗಳಂತೆ ವಿವಿಧ ಬಣ್ಣದ ಹೂಗಳೆಡೆಗೆ ಮತ್ತು ಅವುಗಳ ಮನಮೋಹಕ ಸುಗಂಧದೆಡೆ ಆಕರ್ಷಿತವಾಗುತ್ತಾ ಇರುತ್ತದೆ. ಮಕ್ಕಳು ತಮ್ಮ ಸುತ್ತಮುತ್ತಲಿನ ಆಗುಹೋಗುಗಳನ್ನು ಮತ್ತು ಚಟುವಟಿಕೆಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಾರೆ ಮತ್ತು ಬಹಳ ಸಣ್ಣ ಬದಲಾವಣೆಗೂ ಅವರು ಪ್ರತಿಕ್ರಿಯಿಸುತ್ತಾರೆ. ಅವರು ಯಾವುದೇ ಚಟುವಟಿಕೆಯನ್ನು ಅಥವಾ ಬದಲಾವಣೆಯನ್ನು ಅವರದೇ ಗ್ರಹಿಕೆ ಮತ್ತು ಪೂರ್ವಜ್ಞಾನದ ಮೇಲಿನಿಂದ ಅರ್ಥೈಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ ಮತ್ತು ತಮ್ಮದೇ ಆಲೋಚನೆಗಳನ್ನು ರೂಪಿಸಿಕೊಳ್ಳುತ್ತಾರೆ. ಇಲ್ಲಿಂದಲೇ ಶಿಕ್ಷಕರೊಬ್ಬರ ಪಾತ್ರವು ಪ್ರಾರಂಭವಾಗುತ್ತದೆ.

ಹಾಗಾಗಿ, ಶಿಕ್ಷಕರೊಬ್ಬರಿಗೆ ಇರುವ ಇತರೆಲ್ಲ ಪಾತ್ರ ಮತ್ತು ಜವಾಬ್ದಾರಿಗಳ ಜೊತೆಗೆ ಬಹುಶಃ ಇನ್ನೊಂದು ಪಾತ್ರವೂ ಇದೆ– ಎಲ್ಲರನ್ನೂ ಆಕರ್ಷಿಸುವಂತಹ, ಯಥೇಚ್ಛ ಬಣ್ಣಗಳಿಂದ ಅಲಂಕೃತವಾದ ಸುಂದರ ಉದ್ಯಾನವನವನ್ನು ನಿರ್ಮಿಸುವ ಓರ್ವ ಮಾಲಿಯ ಪಾತ್ರ. ಇಲ್ಲಿ, 'ಉದ್ಯಾನವನ' ಎಂಬ ಪದವು ತರಗತಿಯ ಒಳಗೆ ಮತ್ತು ಹೊರಗೆ ಎರಡೂ ಕಡೆ ಮಕ್ಕಳಿಗೆ ಹೊಸದನ್ನು ಕಲಿಯುವುದಕ್ಕೆ ಪ್ರೇರಣೆ ಕೊಡುವ ಬೋಧನಾ–ಕಲಿಕಾ ಪರಿಕರಗಳನ್ನು (TLM) ಸೂಚಿಸುತ್ತದೆ. ಶಿಕ್ಷಕರೊಬ್ಬರು ತರಗತಿ ಕೊಠಡಿಯೊಳಗೆ ಪ್ರವೇಶಿಸಿದಾಗ, ಎಲ್ಲಾ ವಿದ್ಯಾರ್ಥಿಗಳೂ ಆಕೆ/ತ ತನ್ನ ಜೊತೆಗೆ ಏನು ಪರಿಕರ ತಂದಿದ್ದಾಳೆ/ನೆ ಎಂದು ನೋಡುತ್ತಾರೆ, ಮತ್ತು ಹೊಸ ಸಾಮಗ್ರಿಗಳ ಮೇಲಿನ ಅವರ ದೃಷ್ಟಿಯೇ ಅವರನ್ನು ತರಗತಿಯಲ್ಲಿ ಸಂಪೂರ್ಣ ತಲ್ಲೀನರಾಗಿಸುತ್ತದೆ.

6ನೇ ತರಗತಿಯ ವಿದ್ಯಾರ್ಥಿಗಳೊಂದಿಗಿನ ಬೋಧನಾ ಸಾಮಗ್ರಿಗಳ ಅಥವಾ ಮಕ್ಕಳ ಕಲಿಕೆಗೆ ಸಹಾಯ ಮಾಡುವ ಟಿಎಲ್ಎಂಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವ, ನನ್ನ ತರಗತಿ ಅನುಭವದ ಒಂದು ಉದಾಹರಣೆಯನ್ನು ಕೊಡಲು ಬಯಸುತ್ತೇನೆ. ಈ ತರಗತಿಯ ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯ ಸಮಸ್ಯೆಯನ್ನು ಶಿಕ್ಷಕರು ಆಗಾಗ ಎದುರಿಸಬೇಕಾಗುತ್ತಿತ್ತು. ಪ್ರತಿದಿನ ಅವರ ಕೊನೆಯ ಅವಧಿಯು ಸಮಾಜ ವಿಜ್ಞಾನದ ವಿಷಯವಾಗಿರುತ್ತಿತ್ತು. ಆ ವೇಳೆಗೆ ಬಹುಪಾಲು ಎಲ್ಲಾ ವಿದ್ಯಾರ್ಥಿಗಳು ದಣಿದಿರುತ್ತಿದ್ದರು. ಅದರ ಪರಿಣಾಮವಾಗಿ, ನಾನು ಕೂಡಾ ಬಹಳ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಬೋಧನಾ ಸಾಮಗ್ರಿಗಳು ವಿದ್ಯಾರ್ಥಿಗಳಲ್ಲಿ ಹೊಸ ವಿಷಯಗಳನ್ನು ಕಲಿಯುವ ಆಸಕ್ತಿಯನ್ನು ಪ್ರೇರೇಪಿಸಿ ನನ್ನನ್ನು ರಕ್ಷಿಸಿದವು. ಜೊತೆಗೆ ತರಗತಿ ಚಟುವಟಿಕೆಗಳೂ ದೊಡ್ಡ ಮಟ್ಟಿಗೆ ಸುಧಾರಣೆಯಾದವು.

'ಭೂಮಿಯ ಪ್ರಮುಖ ವಿಭಾಗಗಳು (Major Domains of the Earth) ಎಂಬ ವಿಷಯಕ್ಕೆ (ಅಧ್ಯಾಯ 5, ಭೂಗೋಳಶಾಸ್ತ್ರ, ಎನ್‌ಸಿಇಆರ್‌ಟಿ) ನನ್ನ ವಿದ್ಯಾರ್ಥಿಗಳಿಗೆ ಭೂಮಿಯ ನಾಲ್ಕು ವಿಭಾಗಗಳನ್ನು ವಿವರಿಸುವುದಕ್ಕೆ ನಾನು ಕೆಲವು ಬೋಧನಾ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸಿದೆ. ಅವುಗಳೆಂದರೆ:

1. ಜಲ ಚಕ್ರದ ಒಂದು ಮಾದರಿ
2. ಸಾಗರಗಳು ಮತ್ತು ಖಂಡಗಳ ಕುರಿತ ಒಗಟು
3. ಭೂಮಂಡಲದ ನೀರಿನ ಹಂಚಿಕೆಯನ್ನು ವಿವರಿಸಲು ಒಂದು ಪಾತ್ರೆ, ಒಂದು ಗಾಜಿನ ನಳಿಕೆ, ಬಣ್ಣದ ನೀರು ಮತ್ತು ಡ್ರಾಪರ್
4. ಖಂಡಗಳ ಗಾತ್ರಗಳಿಗೆ ಸಂಬಂಧಿಸಿದ ಒಂದು ಹಾಳೆ
5. ನೀರಿನ ಸಂರಕ್ಷಣೆ ಮತ್ತು ಅದರ ರಕ್ಷಣೆಯ ಉಪಾಯದ ಕುರಿತ ಒಂದು ಸಾಕ್ಷ್ಯಚಿತ್ರ ಮತ್ತು ನೀರನ್ನು ಉಳಿಸುವುದಕ್ಕೆ ಇರುವ ದಾರಿಗಳಿಗೆ ಸಂಬಂಧಿಸಿದ ಒಂದು ಕ್ರಿಯಾಪತ್ರ.

ಈ ಬೋಧನಾ ಸಾಮಗ್ರಿಗಳ ಕಾರಣದಿಂದ ಎಲ್ಲಾ ವಿದ್ಯಾರ್ಥಿಗಳೂ ತರಗತಿಯಲ್ಲಿ ಚಟುವಟಿಕೆಯಿಂದ ಭಾಗವಹಿಸಿದರು. ಆ ಕಾರಣದಿಂದ ತರಗತಿಯ ಕಲಿಕಾ ಪ್ರಕ್ರಿಯೆಯು ಆಸಕ್ತಿದಾಯಕವಾಯಿತು. ಮತ್ತು ನನಗೆ ಕಲಿಕೆಯನ್ನು ಆಧರಿಸಿದ ಫಲಿತವನ್ನು ಸುಲಭವಾಗಿ ಸಾಧಿಸುವುದಕ್ಕೂ ಆಯಿತು.

ವಿಷಯವನ್ನು ಕಲಿಯುವುದಕ್ಕೆ ಬಳಸಿದ ಬೋಧನಾ ಸಾಮಗ್ರಿಗಳು ಮತ್ತು ತರಗತಿ ಚಟುವಟಿಕೆಗಳಲ್ಲಿ ಕಲಿಕಾ ಬೋಧನಾ ಸಾಮಗ್ರಿಗಳ ಬಳಕೆಯನ್ನು ಇನ್ನು ಮುಂದೆ ವಿವರವಾಗಿ, ಚಿತ್ರ ಸಹಿತವಾಗಿ ವಿವರಿಸಲಾಗಿದೆ.

ಜಲಗೋಳ (Hydrosphere)

ಅ) ಪಾತ್ರೆ, ಗಾಜಿನ ಪ್ರನಾಳ, ಬಣ್ಣದ ನೀರು ಮತ್ತು ಡ್ರಾಪರ್‌ಗಳ ಸಹಾಯದಿಂದ ನಾನು ವಿದ್ಯಾರ್ಥಿಗಳಿಗೆ ಭೂಮಿಯ ಮೇಲಿನ ಒಟ್ಟು ನೀರಿನ ಹಂಚಿಕೆಯನ್ನು ವಿವರಿಸಿದೆ. ಹೀಗೆ ವಿದ್ಯಾರ್ಥಿಗಳು ನೀರಿನ ಹಂಚಿಕೆ ಮತ್ತು ಅದರ ಸ್ವರೂಪಗಳ ಕುರಿತು ಕಲಿತರು. ನಾನು ನೀರಿನ ಮಹತ್ವ, ನೀರಿನ ಕುರಿತು ಅರಿವು ಮತ್ತು ಅದರ ಬಳಕೆಯ ಕುರಿತು ಸೂಕ್ಷ್ಮತೆಯನ್ನು ಬೆಳೆಸುವುದಕ್ಕೆ 'When Every Drop Counts', (https://youtu.be/ WxdtmswwHAk) ಎಂಬ ಸಾಕ್ಷ್ಯಚಿತ್ರ ಒಂದರ ಸಹಾಯವನ್ನು ಪಡೆದೆ. ಅದು ರಾಜಸ್ಥಾನದ ಬಾರ್ಮೇರ್ ಜಿಲ್ಲೆಯ ನೀರಿನ ಕೊರತೆಯ ಮತ್ತು ವಿವಿಧ ನೀರು ಸಂರಕ್ಷಣಾ ವಿಧಾನಗಳ ಚಿತ್ರಣವನ್ನು ನೀಡುತ್ತದೆ. ಆ ನಂತರ ನಾನು ವಿದ್ಯಾರ್ಥಿಗಳಿಗೆ ನೀರನ್ನು ಸಂರಕ್ಷಿಸುವುದು ಹೇಗೆ ಎಂಬ ಕುರಿತು ಒಂದು ಕಾರ್ಯಹಾಳೆಯನ್ನು ನೀಡಿದೆ. ಜೊತೆಗೆ ನೀರಿನ ಸಂರಕ್ಷಣೆಯ ಕುರಿತ ಅವರ ಆಲೋಚನೆಗಳನ್ನೂ ಕೇಳಿಸಿಕೊಂಡೆ. ಎಲ್ಲಾ ವಿದ್ಯಾರ್ಥಿಗಳೂ ಕಾರ್ಯಹಾಳೆಯಲ್ಲಿ ಕೊಟ್ಟ ಮಾಹಿತಿಯ ಬಗೆಗೆ ತಮ್ಮ ಪ್ರತಿಕ್ರಿಯೆಯನ್ನು ನೀಡಿದರು. ಆ ಮೇಲೆ ಅವರ ಹಳ್ಳಿ ಮತ್ತು ಪಟ್ಟಣಗಳಲ್ಲಿ ನೀರಿನ ಸಂರಕ್ಷಣೆಗೆ ಅಳವಡಿಸಿರುವ ವಿಧಾನಗಳ ಕುರಿತು ಬರೆದುಕೊಂಡರು.

ಆ) ಜಲ ಚಕ್ರ: ವಿದ್ಯಾರ್ಥಿಗಳಿಗೆ ನೀರಿನ ರೂಪಗಳಲ್ಲಿ ಆಗುವ ಬದಲಾವಣೆಯನ್ನು ಮತ್ತು ಮಳೆ ಹೇಗೆ ಬರುವುದು ಎಂಬುದನ್ನು ವಿವರಿಸುವುದಕ್ಕೆ ನಾನು ಜಲ ಚಕ್ರದ ಒಂದು ಮಾದರಿಯನ್ನು (ಚಿತ್ರ 1) ತಯಾರಿಸಿದೆ. ಈ ಮಾದರಿಯಲ್ಲಿ ವಿದ್ಯಾರ್ಥಿಗಳು

ವಿಶೇಷ ಆಸಕ್ತಿಯನ್ನು ತೋರಿಸಿದರು ಮತ್ತು ಅದು ಅವರ ಮನಸ್ಸುಗಳಲ್ಲಿ ಅಳಿಸಲಾಗದ ಪ್ರಭಾವವನ್ನು ಉಂಟುಮಾಡಿತು.

ಭೂ ವಲಯ (Lithosphere)

ನಾನು ಖಂಡಗಳು, ಅವುಗಳ ಸ್ಥಾನ ಮತ್ತು ಅವುಗಳ ಗಾತ್ರಕ್ಕೆ ಅನುಗುಣವಾದ ಹಾಳೆಗಳಿರುವ ಒಂದು ಒಗಟನ್ನು (ಚಿತ್ರ–2) ಸಿದ್ಧಪಡಿಸಿದೆ. ಇದಕ್ಕೂ ಮುನ್ನ ನಾನು ವಿದ್ಯಾರ್ಥಿಗಳನ್ನು ಐದು ಗುಂಪುಗಳಾಗಿ ವಿಂಗಡಿಸಿದೆ. ಪ್ರತಿ ಗುಂಪಿಗೂ ಒಂದು ಖಂಡಕ್ಕೆ ಸಂಬಂಧಿಸಿದ ಒಗಟಿನ ಹಾಳೆಯನ್ನು, ಅದರ ಗಾತ್ರಕ್ಕೆ ತಕ್ಕಂತೆ ಒದಗಿಸಿದೆ. ಅವರಿಗೆ ಅಲ್ಲದ್ದ ಚುಕ್ಕೆಗಳನ್ನು ಜೋಡಿಸುವುದಕ್ಕೆ ಸಮಯವನ್ನು ನಿಗದಿಪಡಿಸಿದೆ. ಎಲ್ಲಾ ವಿದ್ಯಾರ್ಥಿಗಳೂ ಉತ್ಸಾಹದಿಂದ ಈ ಚಟುವಟಿಕೆಯಲ್ಲಿ ಭಾಗಿಗಳಾದರು ಮತ್ತು ಖಂಡಗಳ ಕುರಿತು, ಅದರ ಸ್ಥಾನ ಮತ್ತು ಗಾತ್ರ, ಇತ್ಯಾದಿಗಳನ್ನು ಅರ್ಥ ಮಾಡಿಕೊಂಡರು.




Figure 1: Water cycle




Figure 2: Mahadweep ki paheli

ವಿದ್ಯಾರ್ಥಿಗಳ ಪ್ರತಿಕ್ರಿಯೆಗಳು ಮತ್ತು ಅದರಿಂದ ಗಳಿಸಿದ ಅನುಭವಗಳು

ನನ್ನ ಅನುಭವಗಳನ್ನು ಹಂಚಿಕೊಳ್ಳುವ ಮೊದಲು ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಎಲ್ಲಾ ಚಿಟ್ಟೆಗಳೂ ಒಂದೇ ಬಗೆಯ ಹೂವಿನ ಕಡೆಗೆ ಆಕರ್ಷಿತಗೊಳ್ಳುವುದಿಲ್ಲ ಮತ್ತು ಅದೇ ಸಮಯದಲ್ಲಿ, ಒಂದು ನಿರ್ದಿಷ್ಟ ಚಿಟ್ಟೆಯು ಯಾವಾಗಲೂ ಒಂದೇ ತೆರನಾದ ಹೂವುಗಳ ಕಡೆಗೆ ಆಕರ್ಷಿತವಾಗುತ್ತದೆ ಎಂದೂ ಇಲ್ಲ. ಬೇರೆ ಬೇರೆ ಚಿಟ್ಟೆಗಳು ಬೇರೆ ಬೇರೆ ಆಕಾರದ, ಗಾತ್ರದ ಮತ್ತು ಸುವಾಸನೆಯ ಹೂವುಗಳೆಡೆಗೆ ಆಕರ್ಷಿತವಾಗುತ್ತವೆ. ಮಕ್ಕಳ ಮನಸ್ಸೂ ಇದೇ ಬಗೆಯಲ್ಲಿ ಕೆಲಸಮಾಡುತ್ತದೆ. ಎಲ್ಲಾ ಮಕ್ಕಳಿಗೂ ಬೇರೆ ಬೇರೆಯದೇ ಆದ ಆಲೋಚಿಸುವ ಮತ್ತು ಅರ್ಥೈಸುವ ಸಾಮರ್ಥ್ಯಗಳಿರುತ್ತವೆ. ಅವರಿಗೆ ಬೇರೆಬೇರೆಯದೇ ಆದ ಅಗತ್ಯಗಳಿವೆ ಮತ್ತು ಅಪೇಕ್ಷೆಗಳಿರುತ್ತವೆ. ಎಲ್ಲರಿಗೂ ಒಂದೇ ಬಗೆಯ ಕಲಿಕಾ ಸಾಮಗ್ರಿಗಳನ್ನು ಅಳವಡಿಸಿ ಕಲಿಕಾ ಫಲಗಳನ್ನು ಪಡೆದುಕೊಳ್ಳುವುದು ಸಾಧ್ಯವಿಲ್ಲ. ಅಂಥ ಒಂದು ಸನ್ನಿವೇಶದಲ್ಲಿ, ನಾವು ವಿದ್ಯಾರ್ಥಿಗಳ ಅಗತ್ಯ ಮತ್ತು ಅಪೇಕ್ಷೆಗಳಿಗೆ ಹೊಂದಾಣಿಕೆ-ಯಾಗುವ ಕ್ರಿಯಾಶೀಲ ಬೋಧನೆಯನ್ನು ಕೈಗೊಳ್ಳುವುದಕ್ಕೆ ಸದಾ ಪ್ರಯತ್ನಿಸುತ್ತಿರಬೇಕು. ಈ ದಿಕ್ಕಿನಲ್ಲಿ ನಮ್ಮ ಕ್ರಿಯೆಗಳು, 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (NCF2005) ಪ್ರಮುಖ ಅಂಶವಾದ ಮಗು ಕೇಂದ್ರಿತ ಶಿಕ್ಷಣವನ್ನು ಬಲಪಡಿಸುತ್ತದೆ.

ಈ ಪಠ್ಯ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನೂ ವಿದ್ಯಾರ್ಥಿಗಳ ಜೊತೆ ಹಂಚಿಕೊಳ್ಳುವುದಕ್ಕೆ ನನಗೆ ಆರು ತರಗತಿಗಳ ಅವಧಿ ಹಿಡಿಯಿತು. ಆದರೆ ಇದು ಅವರಿಗೆ ಕಲಿಯುವುದರ ಕುರಿತು ಒಂದು ಮರೆಯಲಾಗದ ಅನುಭವವನ್ನು ಕೊಟ್ಟಿತು. ಈ ಚಟುವಟಿಕೆಗಳ ಸಮಯದಲ್ಲಿ ವಿದ್ಯಾರ್ಥಿಗಳು ಹಲವು ಪ್ರಶ್ನೆಗಳನ್ನು ಕೇಳಿದರು. ವಿದ್ಯಾರ್ಥಿಗಳ ಕೆಲವು ಪ್ರತಿಸ್ಪಂದನೆಗಳನ್ನು ಮುಂದೆ ನಿರೂಪಿಸಿದ್ದೇನೆ.

ನಾನು ವಿದ್ಯಾರ್ಥಿಗಳಿಗೆ ಭೂಮಿಯ ಮೇಲಿನ ನೀರಿನ ಹಂಚಿಕೆಯ ಕುರಿತು ಒಂದು ಪ್ರಾತ್ಯಕ್ಷಿಕೆ ಕೊಟ್ಟಾಗ, ವಿದ್ಯಾರ್ಥಿಗಳಿಂದ ಬೇರೆಬೇರೆ ಬಗೆಯ ಪ್ರತಿಕ್ರಿಯೆಗಳು ಬಂದವು. ಉದಾಹರಣೆಗೆ, ಕೆಲವು ವಿದ್ಯಾರ್ಥಿಗಳು ಬಳಸುವುದಕ್ಕೆ ಯೋಗ್ಯವಾಗಿರುವ ನೀರಿನ ಪ್ರಮಾಣ (0.0001 % ಅಥವಾ 1 ಲೀಟರ್ ನೀರಿನಲ್ಲಿ ಒಂದು ಬಿಂದು) ಎಷ್ಟು ಕಡಿಮೆ ಇದೆ ಎಂದು ಆಶ್ಚರ್ಯಪಟ್ಟಿದ್ದರು. ಕೆಲವು ವಿದ್ಯಾರ್ಥಿಗಳು ಬೇಸರಗೊಂಡಿದ್ದರು ಮತ್ತು ಕಳವಳಗೊಂಡಿದ್ದರು.. ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳೂ ನೀರನ್ನು ಪೋಲು-ಮಾಡುವುದಿಲ್ಲ ಮತ್ತು ಬೇರೆಯವರೂ ಹಾಗೆ ಮಾಡದಂತೆ ತಡೆಯುತ್ತೇವೆ ಎಂದು ಭರವಸೆ ಕೊಟ್ಟರು.

ವಿದ್ಯಾರ್ಥಿಗಳು ಜಲ ಚಕ್ರದ ಮಾದರಿಯ ಕುರಿತು ವಿಶೇಷ ಆಸಕ್ತಿಯನ್ನು ತೋರಿಸಿದರು. ಅವರು ಕುತೂಹಲದಿಂದ ಆಸಕ್ತಿದಾಯಕವಾದ ಪ್ರಶ್ನೆಗಳನ್ನು ಕೇಳಿದರು. ಅವುಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿದ್ದೇನೆ:

ಪ್ರಶ್ನೆ 1. ಯಾಕೆ ಚಾರ್ಟಿನಲ್ಲಿ ಕೆಲವು ಮೋಡಗಳು ನಗುವಂತೆ ಕಾಣಿಸಿದರೆ, ಮಿಕ್ಕವು ಅಳುವಂತೆ ಕಾಣಿಸುತ್ತವೆ? ಮೋಡಗಳು ಅಳುವಾಗ ನಿಜವಾಗಿಯೂ ಮಳೆ ಬರುವುದೇ?

ಪ್ರಶ್ನೆ 2. ಜಲ ಚಕ್ರದ ಮಾದರಿಯ ಮೇಲೆ ಬರೆಯಲಾದ ಪರಿಭಾಷೆಗಳ ಅರ್ಥವೇನು?

ಪ್ರಶ್ನೆ 3. ಹಸಿರು ಫಲಕದ ಮೇಲಿನ ಜಲ ಚಕ್ರದ ಮಾದರಿಯು ವಿಭಿನ್ನವಾಗಿದೆ. ಅದು ಯಾಕೆ ಹಾಗೆ?

ಪ್ರಶ್ನೆ 4. ಯಾಕೆ ನೀವು ದುಂಡಗಿನ ಫಲಕದ ಮೇಲೆ ಡ್ರಾಯಿಂಗ್ ಮಾಡಿದ್ದೀರಿ? (ಒಬ್ಬ ವಿದ್ಯಾರ್ಥಿಯು ಅದಕ್ಕೆ ಈ ರೀತಿ ವಿವರಿಸಿದ, 'ಮಳೆ ಒಂದು ಚಕ್ರವನ್ನು ಒಳಗೊಂಡಿದೆ. ಬಹುಶಃ ಅದೇ ಕಾರಣಕ್ಕೆ ಇರಬೇಕು.'

ಇದೆಲ್ಲದರ ಹೊರತಾಗಿ, ಕೆಲವು ವಿದ್ಯಾರ್ಥಿಗಳು ಮಾದರಿಯನ್ನು ತಯಾರಿಸುವ ಪ್ರಕ್ರಿಯೆಯನ್ನು ಹೇಳಿಕೊಡಿ ಎಂದು ಕೇಳಿದರು. ಈ ಅನುಭವವು ನನಗೆ ಖುಷಿಕೊಟ್ಟ ವಿಷಯವಾಗಿದೆ.

ಬಹುಶಃ ಅವರು ಈ ರೀತಿಯಲ್ಲಿ ಓದುವುದು ಮತ್ತು ಕಲಿಯುವುದನ್ನು ಆನಂದಿಸಿದ ಕಾರಣ ಮೇಲಿನ ಎಲ್ಲಾ ಪ್ರಶ್ನೆಗಳು ಮತ್ತು ಕುತೂಹಲ ಅವರ ಮನಸ್ಸಿನ ಒಳಗಡೆಯಿಂದ ಎಚ್ಚೆತ್ತು-ಕೊಂಡಿತು. ಆದ ಕಾರಣವೇ ಅವರು ಕಲಿಯುವುದಕ್ಕೆ ಹೆಚ್ಚು ಮನಸ್ಸು ಕೊಡುತ್ತಿದ್ದರು. ಮತ್ತು ಹೆಚ್ಚಿನ ಗಮನಕೊಟ್ಟು ಹೊಸ ವಿಷಯಗಳನ್ನು ಕಲಿಯುವುದೂ ಸಾಧ್ಯವಾಗುತ್ತಿತ್ತು. 'ಖಂಡಗಳು ಮತ್ತು ಅವುಗಳ ಸ್ಥಾನ'ವನ್ನು ಅರ್ಥೈಸಿಕೊಳ್ಳುವುದಕ್ಕೆ ನಾನು ಕೊಟ್ಟ ಒಂದು ಒಗಟನ್ನು ಬಿಡಿಸುವುದರಲ್ಲಿ ಮಕ್ಕಳು ಎಷ್ಟು ತಲ್ಲೀನರಾಗಿದ್ದರು ಎಂದರೆ ಶಾಲೆಯ ವೇಳೆ ಮುಗಿದುಹೋಗಿರುವುದೂ ಅವರ ಗಮನಕ್ಕೆ ಬರಲಿಲ್ಲ. ನಾನು ವೇಳೆ ಆಗಿರುವುದನ್ನು ಅವರಿಗೆ ಹೇಳಿದ ಮೇಲೂ ಕೆಲವು ಮಕ್ಕಳು ಅಲ್ಲೇ ಇದ್ದು, ಒಗಟನ್ನು ಬಿಡಿಸಲು ಬಯಸಿದ್ದರು. ನನಗಂತೂ ಅದು ವಿಶಿಷ್ಟ ಅನುಭವವೇ ಆಗಿತ್ತು. ಸಾಮಾನ್ಯವಾಗಿ ಕೆಲವು ಮಕ್ಕಳು ಕೊನೆಯ ಅವಧಿ ಮುಕ್ತಾಯವಾಗುವ ಮೊದಲೇ ಮನೆಗೆ ಹೊರಡಲು ತವಕಿಸುತ್ತಾರೆ, ಆದರೆ ಆ ದಿನ ಹಾಗೇನೂ ಆಗಲೇ ಇಲ್ಲ.

ತರಗತಿಯ ಚಟುವಟಿಕೆ ನನಗೆ ಒಂದು ಸಂಗತಿಯನ್ನು ಕಲಿಸಿತು: ಮಕ್ಕಳು ಚಿಟ್ಟೆಗಳಂತೆ ಬಣ್ಣದ ಹೂವುಗಳ ಮನಮೋಹಕ ದೃಶ್ಯಕ್ಕೆ (ಇಲ್ಲಿ ಬೋಧನಾ ಸಾಮಾಗ್ರಿಗಳು) ಮತ್ತು ಉದ್ಯಾನವನದೊಳಗೆ ಅವು ಬೀರುವ ಸುಗಂಧಕ್ಕೆ ಸೆಳೆಯಲ್ಪಡುತ್ತಾರೆ. ಅವರು ಹೂವಿನ ಮಕರಂದವನ್ನು ಹೀರುತ್ತಾರೆ.

ವಿವಿಧ ತರಗತಿಯ ಮಕ್ಕಳು ಅವರ ಪಾಠವಿಲ್ಲದ ಅವಧಿಗಳಲ್ಲಿ ಅವರ ತರಗತಿಗೆ ನನ್ನನ್ನು ಕರೆದು ಪಾಠಮಾಡಿ ಎಂದು ಕೇಳಿಕೊಳ್ಳುವಾಗ ಒಬ್ಬ ಶಿಕ್ಷಕನಾಗಿ ನನಗೆ ಅತ್ಯಂತ ಹಿತವಾದ ಅನುಭವ ಉಂಟಾಗುವುದು. ಈ ನನ್ನ ಭಾವನೆಗಳನ್ನು ಪದಗಳಲ್ಲಿ ಹೇಳಿಕೊಳ್ಳುವುದಕ್ಕೆ ಕಷ್ಟ. ಆದರೆ ಅವರಿಗೆ ನನ್ನ ಬೋಧನೆಯ ಪ್ರಕ್ರಿಯೆಗಳು ಮನಮುಟ್ಟುವಂತೆ ಇವೆ ಎಂಬ ಒಂದು ವಿಚಾರವನ್ನು ಖಂಡಿತವಾಗಿಯೂ ಇದು ತೆರೆದು ತೋರಿಸುತ್ತದೆ. ಅದು ನನಗೆ ಯಾವುದೇ ಮಹಾ ಸಾಧನೆಗೂ ಕಡಿಮೆಯಿಲ್ಲದ ಸಂಗತಿ ಮತ್ತು ಬೋಧನಾ ಉಪಕರಣಗಳು ಈ ದಿಸೆಯಲ್ಲಿ ದೊಡ್ಡ ಮಟ್ಟದಲ್ಲಿ ಕಾಣಿಕೆ ನೀಡಿವೆ.



ಆದಿತ್ಯ ಗುಪ್ತ ಅವರು ಧಮ್‌ತರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಅವರು ಭೂಗೋಳಶಾಸ್ತ್ರದಲ್ಲಿ ಪದವಿ ಪಡೆದಿದ್ದಾರೆ ಮತ್ತು 2019ರಿಂದ ಸಮಾಜವಿಜ್ಞಾನ ಬೋಧಕರಾಗಿದ್ದಾರೆ. ಶಿಕ್ಷಕರಾಗಿ ಅವರು ಸಮಾಜ ವಿಜ್ಞಾನದ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಸಂವಾದ ಮತ್ತು ಆತ್ಮೀಯವಾಗಿ ನಡೆಸುವುದನ್ನು ಇಷ್ಟಪಡುತ್ತಾರೆ. ಅವರ ಇನ್ನಿತರ ಆಸಕ್ತಿಗಳು ಕವನ, ಕಥೆಗಳನ್ನು ಬರೆಯುವುದು ಮತ್ತು ಬ್ಲಾಗಿಂಗ್. ಇವರನ್ನು :

adityatin.gupta@azimpremjifoundation.org ಇಲ್ಲಿ ಸಂಪಕಿಸಬಹುದು.

ಅನುವಾದ: **ರಾಮಕೃಷ್ಣ ಭಟ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**